ನಾನು ಒಂದು ಕ್ಷಣ ಯೋಚಿಸಿದೆ. ಹೂಂ ಅನ್ನಲೆ? ಅನ್ನಬಹುದೆ?

ಉತ್ತರ ಗೊತ್ತಾಗಲಿಲ್ಲ.

'ಹೂಂ ಅನ್ನಿ ಅಣ್ಣ; ನನ್ನನ್ನು ನೋಡಿದ ಮೇಲೆ ನಿಮಗೆ ನಿಜಕ್ಕೂ ಅಚ್ಚರಿಯಾಗುತ್ತದೆ.'

ಅಚ್ಚರಿ! ಇದೇನು ಹೇಳುತ್ತಿದ್ದಾಳೆ ಈಕೆ?

'ನನಗೆ ನಿಮ್ಮ ಅಮೂಲ್ಯ ಸಮಯದ ಹತ್ತು ನಿಮಿಷ ಕೊಡಿ. ಅದೂ ಏಕಾಂತವಾಗಿ.'

ಏಕೋ ಗೊತ್ತಿಲ್ಲ, ಹೂಂ ಅಂದು ಬಿಟ್ಟೆ. 'ಸರಿ ಹಾಗಾದರೆ, ಇನ್ನೊಮ್ಮೆ ಎಚ್ಚರಿಸುತ್ತಿದ್ದೇನೆ. ನನ್ನ ಭೇಟಿಯ ಸಮಯ ಮತ್ತು ಸ್ಥಳದ ಬಗ್ಗೆ ನನ್ನ ಸಹಾಯಕ ತಿಳಿಸುತ್ತಾನೆ. ಈ ನಂಬರ್ ನಿನ್ನದೇತಾನೆ'?

'ಇಲ್ಲ, ಇಲ್ಲ, ಇದು ತಾತ್ಕಾಲಿಕ ನಂಬರ್ ಅಷ್ಟೆ. ನಾನು ಒಂದೇ ನಂಬರ್ ಉಪಯೋಗಿಸುವ ಸ್ಥಿತಿಯಲ್ಲಿ ಇಲ್ಲ. ನಾನೇ ಈ ರಾತ್ರಿ ಫೋನ್ ಮಾಡುತ್ತೇನೆ. ಇದೇ ನಿಮ್ಮ ಪ್ರೈವೇಟ್ ನಂಬರಿಗೆ ದಯವಿಟ್ಟು ಎಲ್ಲಿ, ಹೇಗೆ ಮತ್ತು ಎಷ್ಟು ಹೊತ್ತಿಗೆ ಭೇಟಿ ಮಾಡಬಹುದು ಎಂದು ನನ್ನ ನೆಕ್ಸ್ಟ್ ಕಾಲ್‌ನಲ್ಲಿ ತಿಳಿಸಿ ಅಣ್ಣಾ.'

ನಾನು ಹೂಂ ಅನ್ನುವ ಮುಂಚೆಯೇ ಕರೆ ತುಂಡಾಯಿತು. ನನ್ನ ಮನಸ್ಸನ್ನು ಅರ್ಥ ಮಾಡಿಕೊಂಡವನಂತೆ ಸೈಯದ್ ಆ ನಂಬರಿಗೆ ಮರು ಕಾಲ್ ಮಾಡಿದ. 'ನೀವು ಸಂಪರ್ಕಿಸಲು ಪ್ರಯತ್ನಿಸುತ್ತಿರುವ ಚಂದಾದಾರರು ಈ ಕ್ಷಣದಲ್ಲಿ ಪ್ರತಿಕ್ರಿಯೆ ನೀಡುತ್ತಿಲ್ಲ ಅಥವಾ ಸ್ವಿಚ್ ಆಫ್ ಆಗಿರಬಹುದು' ಎಂದು ದೂರವಾಣಿಯ ನಿಸ್ತಂತು ಜಾಲ ಉತ್ತರಿಸಿತು.

ನಾನು ಸತ್ಯೇಂದ್ರನಿಗೆ ಸಂಜೆ ಐದು ಗಂಟೆಗೆ ಮತ್ತೆ ಮೀಟಿಂಗ್‌ಗೆ ಬರಲು ತಿಳಿಸಿದೆ. ಸೈಯದ್ ನನ್ನ ಮನಸ್ಸನ್ನು ಅರಿತವನಂತೆ ಪಕ್ಕದ ರೂಮಿಗೆ ಸರಿದು ಹೋದ. ಏಕೋ ನನ್ನ ಮನಸ್ಸಿನ ತುಂಬಾ ಆ ಕರೆ ಮಾಡಿದ ಕಾಮಿನಿಯ ದನಿಯೇ ತುಂಬಿಕೊಂಡಿತು.

ನಾನು ಈ ಫೀಲ್ಡಿಗಿಳಿದು ಸರಿ ಸುಮಾರು ಮುವತ್ತು ವರ್ಷ. ಒಂದು ಜೀವಮಾನ ಸಾಧನೆಗಾಗಿ ಈ ಮುವತ್ತು ವರ್ಷಗಳು ನಾನು ಎಷ್ಟು ಕಷ್ಟ ಪಟ್ಟಿಲ್ಲ!

★★★

ಅವಳು ಮೊದಲು ಮೊಬೈಲ್ ಸ್ವಿಚ್ ಆಫ್ ಮಾಡಿದಳು. ನಂತರ ಅದರ ಹಿಂಭಾಗ ತೆರೆದು ನಾಜೂಕಾಗಿ ಸಿಮ್ ಹೊರ ತೆಗೆದಳು. ನಿರ್ದಾಕ್ಷಿಣ್ಯವಾಗಿ ಅದನ್ನು ಮುರಿದು ಟಾಯ್ಲೆಟ್‌ಗೆ ಹಾಕಿ ಫ್ಲಷ್ ಮಾಡಿ ನೀರು ಹರಿಸಿದಳು. ಅಂತೂ ಬಹಳ ದಿನಗಳಿಂದ ಪ್ರಯತ್ನಿಸುತ್ತಿದ್ದ ಕರೆ ಸಿಕ್ಕಿಯೇ ಬಿಟ್ಟಿತು. ಅದೂ ಬಹುಕಾಲದ ಗೆಳೆಯನಾದ ಪೊಲೀಸ್ ಅಧಿಕಾರಿಯ ಕೃಪೆಯಿಂದ. ಕುಮಾರ್ ಸಾಬ್(ಅವನು ಗೌರವದಿಂದ ಕುಮಾರಣ್ಣನನ್ನು ಕರೆಯುತ್ತಿದ್ದುದೇ ಹಾಗೆ)ರ ಪ್ರೈವೇಟ್ ನಂಬರ್ ಸಿಕ್ಕಿಯೇ ಬಿಟ್ಟಿತ್ತು.

'ಬಹಳ ರಿಸ್ಕ್ ತಗೋತಿದೀನಿ. ಕುಮಾರ್ ಸಾಬ್‌ಗೆ ಖಂಡಿತ ನನ್ನ ಈ ಕೆಲಸ ಇಷ್ಟ ಆಗೋದಿಲ್ಲ. ಆದರೆ, ನಾನು ನಿನ್ನನ್ನು ಎಷ್ಟು ಇಷ್ಟ ಪಡ್ತೀನಿ ಅಂದ್ರೆ, ನಿನಗೆ ಒಳ್ಳೆಯದಾಗಬೇಕು ಅಂತ ಅವರ ಪ್ರೈವೇಟ್ ನಂಬರ್ ಶೇರ್ ಮಾಡಿದೀನಿ.'

ಅವನು ಮಾತನಾಡುತ್ತಲೇ ಮಾಮೂಲಿಗಿಂತ ಎರಡು ಪೆಗ್ ಹೆಚ್ಚಿಗೆ ಏರಿಸಿದ.

'ಈ ಕೆಲಸ ಪೊಲೀಸರಿಂದ ಆಗುವಂಥದಲ್ಲ. ಇಂಥಾದಕ್ಕೆ ಕುಮಾರ್ ಸಾಬ್ ಸರಿ' ಅವನ ಕಣ್ಣುಗಳಲ್ಲಿ ನನ್ನ ಬಗ್ಗೆ ಅಪಾರ ಪ್ರೀತಿಯೂ, ಕುಮಾರಣ್ಣನ ಬಗ್ಗೆ ಅತೀವ ಗೌರವವೂ, ಅವನ ಅಂತರಾಳದಲ್ಲಿ ಸ್ವಲ್ಪ ಮಟ್ಟಿನ ಭಯವೂ ನನಗೆ ಕಂಡು ಬಂತು.